ಟೆಂಡರ್ ಅವಧಿಯಲ್ಲಿ ಒಟ್ಟು ಕಾಮಗಾರಿಯ ಪ್ರತಿಶತ 90 ರಷ್ಟು ಕಾಮಗಾರಿಯ ಪ್ರಮಾಣವನ್ನು ತೃಪ್ತಿಕರವಾಗಿ ಪೂರೈಸಿದ್ದಲ್ಲಿ ನಿಗದಿತ ವೇಟೇಜನ್ನು (weightage) ನೀಡಲಾಗುವುದು.

ಇಂಡಿ ಶಾಖಾ ನಾಲೆ ನವೀಕರಣ ಕಾಮಗಾರಿಯಲ್ಲಿ ನಡೆದ ಕಳಪೆ ಕಾಮಗಾರಿ

381(668); ಶ್ರೀ ಗುರುಪಾಟೀಲ ಶಿರವಾಳ

ಅ) ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ (ಕೆ.ಬಿ.ಜೆ.ಎನ್.ಎಲ್) ವ್ಯಾಪ್ತಿಯ ಇಂಡಿ ಉಪ ಕಾಲುವೆಗಳ ನಾಲೆ ನವೀಕರಣ ಮಾಡಲು ಲಾರಸನ್ ಅಂಡ್ ಟರ್ಬೊ (Larsen and Turbo) ಕಂಪನಿಯವರಿಗೆ ವಹಿಸಿದ ಕಾಮಗಾರಿಯ ಮೊತ್ತವೆಷ್ಟು ಹಾಗೂ ವಹಿಸಿರುವ ಕಾಮಗಾರಿಯ ದೂರ ಎಷ್ಟು;

ಆ) ಈ ಕಂಪನಿಯವರಿಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ಕಾಲಮಿತಿಯೇನು;

ಇ) ಈ ಕಾಮಗಾರಿಯನ್ನು ನಿಗದಿತ ಸಮಯದೊಳಗೆ ಪೂರ್ಣಗೊಳಿಸಲಾಗುವುದೇ;

ಈ) ಈ ಕಂಪನಿ ನಿರ್ವಹಿಸುತ್ತಿರುವ ಕಾಮಗಾರಿಗೆ ನಿಗದಿತ ಕಾಮಗಾರಿಗಿಂತ ಕಡಿಮೆ ದೂರ ಕಾಮಗಾರಿ ಮಾಡಿದ್ದರೂ ಸಹ ಕಂಪನಿಗೆ ಶೇಕಡ 25 ಹೆಚ್ಚುವರಿ ಮೊತ್ತ ಕೊಡಲಾಗುತ್ತಿದೆಯೇ?

ಶ್ರೀ ಎಂ.ಬಿ. ಪಾಟೀಲ (ಜಲಸಂಪನ್ಮೂಲ ಸಚಿವರು)

ಅ) ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ವತಿಯಿಂದ ಇಂಡಿ ಶಾಖ ಕಾಲುವೆ ಕಿ.ಮೀ.0.00 ರಿಂದ 64.00 (64.00 ಕಿಲೋ ಮೀಟರ್) ರವರೆಗಿನ ಆಧುನೀಕರಣ ಕಾಮಗಾರಿಯನ್ನು ಅನುಮೋದಿತ ಯೋಜನೆಯಡಿ ಕೈಗೆತ್ತಿಕೊಳ್ಳಲಾಗುತ್ತಿರುತ್ತದೆ. ಈ ಕಾಮಗಾರಿಯನ್ನು

₹ 272.139 ಕೋಟಿಗಳ ಮೊತ್ತಕ್ಕೆ ಗುತ್ತಿಗೆದಾರರಾದ ಮೆ: ಲಾರಸನ್ ಅಂಡ್ ಟ್ಯೂಬ್ರೊ ಲಿಮಿಟೆಡ್ (Larsen and Toubro Limited) ರವರಿಗೆ ವಹಿಸಲಾಗಿರುತ್ತದೆ.

ಆ) ಟೆಂಡರ್ ಕರಾರಿನಂತೆ ಈ ಕಾಮಗಾರಿಯನ್ನು ಕಾಲುವೆಯ ಕ್ಲೋಜರ್ ಅವಧಿಯಾದ 3 ತಿಂಗಳಲ್ಲಿ ಅಂದರೆ 90 ದಿನಗಳಲ್ಲಿ ಪೂರ್ಣಗೊಳಿಸಬೇಕಾಗಿರುತ್ತದೆ.

ಇ) ಕಾಮಗಾರಿಯು ಕ್ರಿಯಾ ಯೋಜನೆಯಂತೆ ಪ್ರಗತಿಯಲ್ಲಿದ್ದು ನಿಗಧಿತ ಸಮಯದೊಳಗೆ ಪೂರ್ಣಗೊಳಿಸಲಾಗುವುದು.

ಈ) ಗುತ್ತಿಗೆ ಒಪ್ಪಂದದ ಷರತ್ತುಗಳಂತೆ ಗುತ್ತಿಗೆದಾರರು ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಿದರೆ ನಿಗಧಿತ ವೈಟೇಜನ್ನು ನೀಡಲಾಗುವುದು.

ನಾಲೆ ನವೀಕರಣ ಕಾಮಗಾರಿಯಲ್ಲಿ ನಡೆದ ಅವ್ಯವಹಾರ

382(669); ಶ್ರೀ ಗುರುಪಾಟೀಲ ಶಿರವಾಳ

ಅ) ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ (ಕೆ.ಬಿ.ಜೆ.ಎನ್.ಎಲ್) ವ್ಯಾಪ್ತಿಯ ಇಂಡಿ ಉಪ ಕಾಲುವೆಗಳ ನಾಲೆ ನವೀಕರಣ ಕಾಮಗಾರಿಯ ಗುತ್ತಿಗೆಯನ್ನು ಪಡೆದ ಎಲ್ ಮತ್ತು ಟಿ ಕಂಪನಿಯವರು ಸ್ಥಳೀಯ ಗುತ್ತಿಗೆದಾರರಿಗೆ ಉಪ ಗುತ್ತಿಗೆಯನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ, ಉಪ ಗುತ್ತಿಗೆದಾರರು ಯಾವುದೇ ಅರ್ಹತೆ ಹೊಂದಿರುವುದಿಲ್ಲದಿರುವುದರಿಂದ ಈ ಕಾಮಗಾರಿಗೆ ಬೇಕಾಗಿರುವ ಕೆಲಸಗಾರರು ಹಾಗೂ ಯಂತ್ರೋಪಕರಣಗಳನ್ನು ಹೊಂದಿಲ್ಲದಿರುವುದರಿಂದ ಕಾಮಗಾರಿಯು ಕಳಪೆ ಮಟ್ಟದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;